(ii) Death of a College Student at Ranebennur.

†ಶ್ರೀ ಎಚ್. ಡಿ. ದೇವೆ ಗೌಡ: ಮಾನ್ಯ ಅಧ್ಯಕ್ಷಣಿಯವರೆ, ರಾಣಿಬೆನ್ನೂರಿನಲ್ಲಿ ನಡೆದಂತಹ ಪೋಲೀಸ್ ದೌರ್ಜನ್ಯದ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶಕೋರಿ ತಮಗೆ ನೋಟೀಸ್ ಕಳುಹಿಸಿದ್ದೆ. ಕಳೆದ ಸಾರಿ ಈ ಶಾಸನ ಸಭೆಯಲ್ಲಿ ಗುಲ್ಬರ್ಗದಲ್ಲಿ ಏನೊಂದು ಘಟನೆ ನಡೆಯಿತು, ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಒತ್ತಾಯ ಮಾಡಿದ್ದೇವು. ಆಗ ಮಾನ್ಯ ಮುಖ್ಯಮಂತ್ರಿಯವರು ವಿರೋಧ ಪಕ್ಷದವರು ಮಾಡಿದಂತಹ ಆಪಾದನೆಗಳ ಬಗ್ಗೆ ಅದು ಬುಡವಿಲ್ಲದ ಆಪಾದನೆಗಳು ಎನ್ನುವ ಧಾಟಿಯಲ್ಲಿ ಮಾತನಾಡಿದರು. ಆದಾದ ನಂತರ ಕೇವಲ ಒಂದೆರಾರದಲ್ಲಿ ಈ ಘಟನೆ ನಡೆದಿದೆ. ಒಬ್ಬ ಬಿ. ಕಾಂ. ಓದ್ದುತ್ತಿದ್ದ ಹುಡುಗನನ್ನು ಸೈಕಲ್ ಕದ್ದ ಎಂಬ ಆಪಾದನೆಯ ಮೇಲೆ ಎರಡನೆಯ ತಾರೀಕು ಸುಜೆ ಪೋಲೀಸ್ ಸ್ಟೇಷನಿಗೆ ಕರೆದುಕೊಂಡು ಹೋಗಿ ಅವನಿಗೆ ಚೆನ್ನಾಗಿ ಮನಸ್ಪೇಜ್ಜೆಯಾಗಿ ಹೊಡೆದಿದ್ದಾರೆ. ಅವತ್ತು ರಾತ್ರಿ ನನಗೆ ಅಲ್ಲಿಂದ ಟ್ರಂಕ್ ಕಾಲ್ ಹಾಕಿ ಈ ವಿಚಾರ ತಿಳಿಸಿದ್ದಾರೆ. ಹುಡುಗ ಪ್ರಜ್ಞೆ ತಪ್ಪಿದ ಮೇಲೆ ಆಸ್ಪತ್ರೆಗೆ ಟ್ರೀಟ್ ಮಾಡಲು ಕರಕೊಂಡು ಹೋಗಿದ್ದಾರೆ. ಅಲ್ಲಿಂದ ಆತನ ಮನೆಗೆ ಕರೆಕೊಂಡು ಹೋಗಿದ್ದಾರೆ. ಹಾಗೆ ಮನೆಗೆ ಹೋದ ೨-೩ ನಿಮಿಷಗಳಲ್ಲಿ ಹುಡುಗ ಸತ್ತು ಹೋಗಿದ್ದಾನೆ. ಇವರ ಪರಿಣಾಮವಾಗಿ ರಾಣಿಬೆನ್ನೂರು ಟೌನಿನಲ್ಲಿ ಒಂದು ಡೆಮಾನ್‌ಸ್ಟ್ರೇಶನ್ ನಡೆದು, ಪರಿಸ್ಥಿತಿ ವಿಕೋಪಕ್ಕೆ ಹೋಗಿ ಜನರು ಅಂಚೆ ಕಚೇರಿಯನ್ನು ಸುಟ್ಟು ಹಾಕಿದ್ದಾರೆ ಅದರ ರಕ್ಷಣೆಗೆ ಬಂದಂತಹ ಅಗ್ನಿ ಶಾಮಕ ದಳದವರ ವಾಹನವನ್ನು ಸಹ ಸುಟ್ಟಿದ್ದಾರೆ. ಆ ಮೇಲೆ ಅಲ್ಲಿ ಲಾಟೀ ಚಾರ್ಜ್, ಮತ್ತು ಟಿಯರ್ ಗ್ಯಾಸ್ ಎಲ್ಲಾ ನಡೆದಿದರೆ ಮತ್ತು ಸೆಕ್ಷನ್ ೧೪೪ ಸಹ ಜಾರಿಯಲ್ಲಿದೆ. ಆ ಮೇಲೆ ಪೋಲೀಸರು ತಾವು ಮಾಡಿದಂತಹ ಕೃತ್ಯವನ್ನು ಮುಚ್ಚಿಕೊಳ್ಳುವುದಕ್ಕೆ, ಆ ಹುಡುಗನನ್ನು ಯಾರ ಡಾಕ್ಟರ್ ಟ್ರೀಟ್ ಮಾಡಿದ್ದಾರೆ. ಅವರು ಆ ಹುಡುಗನಿಗೆ ಯಾವುದೇ ಗಾಯಗಳು ಆಗಿಲ್ಲವೆಂದು ಸರ್ಟಿಫಿಕೇಟು ಕೊಡುವುದಕ್ಕೆ ಪೋಲೀಲೀಸರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ. ನೀನು ಈ ರೀತಿ ಸರ್ಟಿಫಿಕೇಟ್ ಕೊಡದಿದ್ದರೆ ನಿನ್ನ ಪರಿಸ್ಥಿತಿ ಹದಗೆಡುತ್ತದೆ, ನೀನು ತೊಂದರೆಗೆ ಈಡಾಗುತ್ತಿ ಎಂದು ಹೇಳಿ ಹೆದರಿಸಿದ್ದಾರೆ. ಇದರ ಜೊತೆಗೆ ಆ ಹುಡುಗನ ತಾಯಿಂದ ಒಂದು ಹೇಳಿಕೆ ತೆಗೆದು ಕೊಂಡಿದ್ದಾರೆ. ಅದು ಹೇಗೆ ಎಂದರೆ, ''ನನ್ನ ಮಗನಿಗೆ ಮೂರ್ಚೆ ರೋಗ ಇತ್ತು'' ಎಂದು. ಆದ್ದರಿಂದ ಪೋಲೀಸರು ತಾವು ಮಾಡಿದಂತಹ ಹೇಯ ಕೃತ್ಯವನ್ನು ಮುಚ್ಚಿಡುವುದಕ್ಕೆ ಇಷ್ಟು ದೂರ ಹೋಗಿದ್ದಾರೆ. ಇವತ್ತು ಇಡೀ ರಾಣಿಬೆನ್ನೂರು ಪೇಟೆಯ ಜನರಿಗೆ ಗೊತ್ತಿರತಕ್ಕಂತಹ ವಿಚಾರವನ್ನು ಇವರು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ನನಗೆ ಸರ್ಕಾರದಲ್ಲಿ ವಿಶ್ವಾಸವಿಲ್ಲ. ಏಕೆಂದರೆ, ಇಂತಹ ಆಪಾದನೆಗಳನ್ನು ಕೇವಲ ವಿರೋಧ ಪಕ್ಷದವರು ಮಾಡುತ್ತಾರೆನ್ನುವ ಮಾತ್ರಕ್ಕೆ ಅದನ್ನು ಅಲ್ಲಗಳೆಯುತ್ತಿದ್ದಾರೆ. ಇವರು ಒಂದು ಅರಸಿನ ಕಾಮಾಲೆ ಬಂದರೆ ಯಾವರೀತಿ ಎಲ್ಲವೂ ಹಳದಿಯಾಗಿ ಕಾಣುತ್ತದೋ, ಆದೇ ರೀತಿಯಲ್ಲಿ ನಾವು ಹೇಳುವುದನ್ನು ಸಹ ನೋಡುತ್ತಿದ್ದಾರೆ. ನಮಗೆ ಒಂದು ಅರಿಸಿನ ರೋಗ ಬಂದಿದೆ ಎಂದು ತಿಳಿದು ಕೊಂಡಿದ್ದಾರೆ. ಇಂತಹ ವಿಚಾರಗಳಲ್ಲಿ ನಾವು ಏನನ್ನು ಹೇಳಿದರೂ, ನೀವು ಪೋಲೀಸರ ವರ್ತನೆಯನ್ನು ಸಮರ್ಥನೆ ಮಾಡುತ್ತಿದ್ದೀರಿ. ಒಂದು ವೇಳೆ ಆ ಹುಡುಗನಿಗೆ ಮೂರ್ಛೆ ರೋಗ ಬರುತ್ತದೆ ಎಂದು ಸಮರ್ಥನೆ ಮಾಡಿದರೂ ಟ್ರೀಟ್ ಮಾಡಿದ ಎರಡು ಮೂರು ನಿಮಿಷಗಳಲ್ಲಿ ಆತ ಸಾಯುವುದಕ್ಕೆ ಕಾರಣವೇನು ಮತ್ತು ಇದರ ಹಿನ್ನಲೆಯೇನು? ಆದ್ದರಿಂದ ಇದರಲ್ಲಿ ನಡೆದಿರತಕ್ಕಂತಹ ಘಟನೆ ಏನೆಂಬುದನ್ನು ಕೂಲಂಕಷವಾಗಿ ವಿಚಾರಣೆ ಮಾಡಬೇಕು. ಆಸ್ಪತ್ರೆಗೆ ಯಾವ್ಯಾವ ಚಿಕಿತ್ಸೆಗಾಗಿ ಆತನನ್ನು ಕರಕೊಂಡು ಹೋದರು; ಮತ್ತು ಆತನಿಗೆ ಎಲ್ಲಿಗೆ ಹೊಡೆದರು; ಕರುಳಿಗೆ ಏಟು ಬಿದ್ದು ಒಡೆದು ಹೋಯಿತೆ;— ಇತ್ಯಾದಿ ಸತ್ಯಾಂಶಗಳನ್ನು ಅರಿಯುವುದಕ್ಕೆ ವಿಚಾರಣೆಯಾಗಬೇಕು. ಏಕೆಂದರೆ ಏನೊಂದು ಹೇಯ ಕೃತ್ಯ ಅಲ್ಲಿ ನಡೆದಿದೆ ಅದರ ಬಗ್ಗೆ ಕೂಲಂಕಷವಾದ, ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು. ನಾವು ಇವತ್ತು ಎಲ್ಲದಕ್ಕೂ ಜುಡಿಶಿಯಲ್ ಎನ್‌ಕ್ವಾಯರಿಯಾಗಬೇಕೆಂದು ಹೇಳುತ್ತಿದ್ದೇವೆಂದು ಸರ್ಕಾರ ಹೇಳಬಹುದು ಆದರೆ ಜುಡಿಶಿಯಲ್ ಎನ್‌ಕ್ವಾಯರಿ ಮಾಡುವುದಕ್ಕೆ ಇದಕ್ಕಿಂತ ಹೆಚ್ಚಿನ ದುರ್ಘಟನೆ ಬೇರೆ ಯಾವುದೂ ಇಲ್ಲ. ಈ ಘಟನೆಯನ್ನು ಯಾವ ನಾಗರೀಕ ಸಹ ಸಮರ್ಥನೆ ಮಾಡಲಾರ. ಇವತ್ತು ಪೋಲೀಸರೊಡನೆ ನಾವು ಸಹಕರಿಸಬೇಕೆಂಬುದು ನಿಜ. ಆದರೆ ಯಾವ ಸಿಬ್ಬಂದಿ ಕಾನೂನಿನ ರಕ್ಷಣೆ ಮಾಡಬೇಕೋ, ಅಂಥ ಇಲಾಖೆಯೇ ಇಂತಹ ಅಮಾನುಷ ಕೃತ್ಯವನ್ನು ಎಸಗುವುದಕ್ಕೆ ಹೊರಟಾಗ ಅದನ್ನು ಸರ್ಕಾರ ತನ್ನಲ್ಲಿ ಮೆಜಾರಿಟಿ ಇದೆಯೆಂದು ಮುಚ್ಚಿಟ್ಟರೆ ಮುಂದೆ ದೇವರ ಕೋರ್ಟಿನಲ್ಲಿ ಸಹ ನಿಮಗೆ ಅದರ ಬಗ್ಗೆ ಮನ್ನಣೆ ಸಿಗುವುದಿಲ್ಲ ಮತ್ತು ಆ ಜನರ ಶಾಪಕ್ಕೆ ಗುರಿಯಾಗುತ್ತೀರಿ ಎಂದು ಹೇಳಬಯಸುತ್ತೇನೆ.

ಏಕೆಂದರೆ ಕೆಳಿದ ಸಾರಿ ಗುಲ್ಬರ್ಗಾ ಅಧಿಕಾರಿಗಳ ಬಗ್ಗೆ ಮಾತನಾಡಿದಾಗ ವಿರೋಧಪಕ್ಷದ ಬಗ್ಗೆ ಒಂದು ರೀತಿಯ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಬಹಳ

(ಶ್ರೀ ಎಚ್. ಡಿ. ದೇವೇಗೌಡ)

ಖೇದದಿಂದ ಮಾತನಾಡಿದ್ದಾರೆ. ಏನು ಇಂತಹ ಘಟನೆಗಳು ಈ ರಾಜ್ಯದಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳಿಂದ ಉಂಟಾಗಿ ಇಂತಹ ಹೀನಕೃತ್ಯಗಳು ನಡೆಯಬೇಕೇ ಎಂಬುದಾಗಿ ನಾನು ಸರ್ಕಾರದವರನ್ನು ಕೇಳುತ್ತೇನೆ. ಎತಕ್ಕೆ ಆ ಹೆಣವನ್ನು ಸುಟ್ಟಿದ್ದಾರೆ, ಹೂತಿದ್ದಾರೆ ಗೊತ್ತಿಲ್ಲ. ಒಂದುವೇಳೆ ಹೆಣವನ್ನು ಸುಡದೇ ಇದ್ದರೆ ಆದನ್ನು ಭೂಮಿಯಲ್ಲಿ ಹೂತಿರಬೇಕು ಆದನ್ನು ಈಗ ತೆಗೆದು ನೋಡಿದ ಕಾರಣವೇನಿತ್ತು. ಯಾವ ಗಾಯವಾಗಿತ್ತು. ಏಕೆ ಹೂತಿದ್ದಾರೆ.—ಇವೆಲ್ಲದರ ಪೂರ್ಣ ಅಂಕೆ ಅಂಶಗಳು ಮುಂದೆ ಪರಿಶೀಲನೆ ಯಾಗಬೇಕು. ಇವೆಲ್ಲಕ್ಕೂ ಪೋಲೀಸಿನವರೇ ಕಾರಣರಾಗಿರುತ್ತಾರೆ. ಅವರು ಮಾಡಿದಂಥ ತಪ್ಪನ್ನು ಸಕಾರಣಗಳಿಂದ ಮುಂಚ್ಚುವುದಕ್ಕೆ ಪ್ರಯತ್ನಮಾಡಿದ್ದಾರೆಂಬುದು ನಿರ್ವಿವಾದವಾದುದು. ದಯಮಾಡಿ ಈ ರಾಜ್ಯದಲ್ಲಿ ಇಂತಹ ಹೇಯ ವರ್ತನೆಗಳು ಪೋಲೀಸಿನವರಿಂದ ನಡೆಯುತ್ತಿದ್ದರೆ ಅವನ್ನು ತಡೆಯುವುದಕ್ಕೆ ನ್ಯಾಯ ಹಾಗೂ ರಕ್ಷಣಾ ದೃಷ್ಟಿಯಿಂದ ಇವತ್ತು ಸರಿಯಾದಂಥ ವಿಚಾರಣೆಯಾಗಬೇಕು. ಇದರ ಬಗ್ಗೆ ನಿಜವಾಗಿಯೂ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕು. ಇದರ ಬಗ್ಗೆ ಇಂದು ಆಥವಾ ನಾಳೆ ಗಲಾಟೆ ಬರುತ್ತದೆಂದು ತಿಳಿದು ಸರ್ಕಾರದ ಮೇಲೆ ಇದರ ಬಗ್ಗೆ ಒತ್ತಡ ಬರುತ್ತದೆಂಬ ಹಿನ್ನೆಲೆಯಿಂದು ಯಾವ ದಿವಸ ಘಟನೆ ನಡೆದಿದೆಯೋ ಅದೇ ದಿವಸನೇ ಪೋಲೀಸಿನವರು ಈ ವಿಚಾರವನ್ನು ನಿರ್ಲಕ್ಷಿಸುತ್ತಿದ್ದಾರೆ. ಇದು ಪೋಲೀಸಿನವರಿಂದ ನಡೆದಿಲ್ಲವೆಂಬ ಅಂಶವನ್ನು ರುಜುವಾತು ಮಾಡಲು ಮತ್ತು ಬಹಶಃ ತಪ್ಪನ್ನು ಮುಂಚ್ಚಿ ಕೊಳ್ಳುವುದಕ್ಕಾಗಿ ಬೆಂಗಳೂರಿನ ಒಬ್ಬ ಹಿರಿಯ ಅಧಿಕಾರಿ ಕೊಟ್ಟಿರುವ ಹೇಳಿಕೆ, ಹಾಗೂ ಪೋಲೀಸ್ ಇಲಾಖೆ ಕೊಟ್ಟಿರುವ ವರೆದಿ ವಿಚಾರದಲ್ಲಿ ಸರಿಯಾಗಿ ವಿಚಾರಣೆಯಾಗಬೇಕು. ಯಾವ ಕಾರಣದಿಂದ ಪೋಲೀಸಿನವರು ಪ್ರೆಸ್ಸಿಗೆ ಹೋಗುವ ಅಗತ್ಯವಿತ್ತು ? ಇವತ್ತು ಅವರು ಈ ಪ್ರಯತ್ನಮಾಡಿದ್ದಾರೆಂದು ಹೇಳಿದರೆ ಇದರ ಬಗ್ಗೆ ಯಾವುದೇ ಕಾರಣದಿಂದ ಸಂದೇಹ ಪಡಬೇಕಾಗಿಲ್ಲ, ಪೋಲೀಸಿನವರು ಪತ್ರಿಕೆಗಳಲ್ಲಿ ಕೊಟ್ಟಿರುವ ಹೇಳಿಕೆಯ ಹಿನ್ನೆಲೆಯನ್ನು ತುಲನೆಮಾಡಿದರೆ ಅದು ವ್ಯಕ್ತವಾಗುತ್ತದೆ ಹಿರಿಯ ಅಧಿಕಾರಿಗಳು ಆದನ್ನು ನಿರಾಕರಿಸಿದ್ದಾರೆ. ಪೋಲೀಸ್ ಇನ್‌ಸ್ಪೆಕ್ಟರ್ ಅವರು ಆ ಹುಡುಗನಿಗೆ ಗಾಯ ಆಗಿರಲಿಲ್ಲ, ಮೂರ್ಛೆ ಬರುತ್ತಿತ್ತು ಎಂಬುದಾಗಿ ಅವನ ತಾಯಿ ಹೇಳಿದ್ದಾಳೆಂದು ಈ ದೇಶದ ಜನರಿಗೆ ಮೋಸಮಾಡುವುದಕ್ಕೆ ಈ ಒಂದು ಕಾರ್ಯವನ್ನು ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಆದ್ದರಿಂದ ಇದರ ಬಗ್ಗೆ ಒಂದು ನಿಷ್ಪಕ್ಷಪಾತವಾದ ಜುಡಿಷಿಯಲ್ ಪ್ರೋಬ್ ಆಗಬೇಕು. ಮಂತ್ರಿಗಳಾದವರು ಈ ಜುಡಿಷಿಯಲ್ ಪ್ರೋಬನ್ನು ಲಘು ಮಾಡುತ್ತಾರೆ. ಈ ವಿಚಾರದಲ್ಲಿ ಸರ್ಕಾರದವರು ನಿಷ್ಪಕ್ಷಪಾತವಾದ ನ್ಯಾಯವನ್ನು ಈ ದೇಶದ ಜನರಿಗೆ ಒದಗಿಸುತ್ತಾರೆಂಬ ಭಾವನೆ ಇದೆ. ಆ ಪ್ರಕಾರ ನಿಷ್ಪಕ್ಷಪಾತವಾದ ವಿಚಾರಣೆಯನ್ನು ಮಾಡಬೇಕು. ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗೆ ಶಿಕ್ಷೆಯಾಗಬೇಕು. ಏಕೆಂದರೆ ನಾವು ಈ ವಿಚಾರದಲ್ಲಿ ತಪ್ಪಿತಸ್ಥನನ್ನು ಯಾವ ಕಾರಣಾದಿಂದಲೂ ಬಿಡುವುದಿಲ್ಲ. ಮಾನ್ಯಮುಖ್ಯ ಮಂತ್ರಿಗಳು ಈ ಗುಲ್ಬರ್ಗಾ ಪ್ರಕರಣದ ಬಗ್ಗೆ ಕೊಟ್ಟ ಹೇಳಿಕೆಯೇ ಬೇರೆ, ಐ. ಜಿ. ಪಿ ಯವರು ಸಿ. ಐ. ಡಿ. ಅಧಿಕಾರಿಯನ್ನು ಕಳುಹಿಸಿದ್ದಾರೆಂದು ಅವರು ಹೇಳಿದರು. ಈ ಕೇಸನ್ನು ಪೋಲೀಸ್ ಇಲಾಖೆಯವರಿಂದ ವಿಚಾರಣೆಮಾಡಿಸುವುದಕ್ಕಾಗುವುದಿಲ್ಲ. ಪೋಲೀಸ್ ಇಲಾಖೆಯವರು ಕೊಟ್ಟವರದಿಗೂ, ಮಾನ್ಯಮುಖ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಕೊಟ್ಟ ಹೇಳಿಕೆಗೂ, ಮತ್ತು ಐ ಜಿ ಪಿ. ಯವರು ಕೊಟ್ಟ ಹೇಳಿಕೆಗೂ ಹಿಂದಕ್ಕೊಂದು ತದ್ವಿರುದ್ಧವಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಯಾವುದೇ ರೀತಿಯ ಇಚ್ಛತ್ ಬೇಡ. ತಪ್ಪಿಗೆ ತಕ್ಕ ಶಿಕ್ಷೆ ಆಗಬೇಕೆಂದು ಹೇಳುತ್ತೇನೆ. ಸರ್ಕಾರ ಇದರ ಬಗ್ಗೆ ಕೂಡಲೇ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ. ಬಿ. ಕೋಳಿವಾಡ (ರಾಣಿಬೇನ್ನೂರ್) ಆ ಭಾಗದ ಶಾಸಕನಾಗಿ ನಾನು ಇರುವುದರಿಂದು ಮಾನ್ಯ ಶ್ರೀ ದೇವೇಗೌಡರು ಆದರ ಬಗ್ಗೆ ಮಾರ್ಗದರ್ಶನ ಮಾಡಿ ಇಲ್ಲಿ ವಿವರಿಸಬೇಕಿಲ್ಲವೆಂದು ನಾನು ಹೇಳುತ್ತೇನೆ. ಒಬ್ಬ ಹುಡುಗ ಸೈಕಲ್ ಕಳವು ಮಾಡಿದ್ದಾನೆಂದು ಒಂದು ದೂರು ಬಂದ ಕೂಡಲೇ ಆ ಸೈಕಲ್ಲನ್ನು.....

SRI H.M. CHANNABASAPPA : Madam Speaker, this is a very serious matter. I share the anxiety of the hon. the Leader of the Opposition and also the hon. members, both on this side and that side that Justice must be meted out. But I would like to submit that if a discussion is allowed on this matter—not that Government is perturbed about it—it would not be fair in the interest of the case each man trying to say whatever opinion he has and each man trying

to maintain what he knows about it. While we are all anxious to have a dispassionate investigation into the whole case and to meet out punishment to the persons, whoever it may be, who has been responsible, if at all he is responsible, would it be fair in the interest of Justice to go ahead with the discussion ? I would make a statement on this shortly But, I would appeal to the hon. members of this House to have a little restraint on this subject and not allow themselves to give expression to whatever feeling they have about it, because once we say certain things we are committed to it. So, it is better we do not prolong the discussion about this

SRI M. S KRISHNAN (Malleswaram) :—With due respects to the Hon'ble Minister Sri Channabasappa, I have to disagree with what he says. I do understand the gravity of the situation. But, I do not know how the gravity of the situation is going to be aggravated by the opinions expressed by the hon members of this House. On the other hand, I feel that it will be a sort of contribution that we would like to make in respect of a particular incident so that the Government understand all the implications of it and take a very serious action with regard to that.

ಅಧ್ಯಕ್ಷರು : ಮಾನ್ಯ ಶ್ರೀ ದೇವೇಗೌಡರು ಪತ್ರಿಕೆಯಲ್ಲಿ ಬಂದಿರುವ ಅಂಶವನ್ನು ನೋಡಿ ವಿಸ್ತಾರವಾಗಿ ವಿಶದವಾಗಿ ಹೇಳಿದ್ದಾರೆ. ಮತ್ತೆ ಪುನಃ ತಾವು ಏನು ಹೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್ : ನಾನು ಹೇಳುವುದು ಪತ್ರಿಕೆಯಲ್ಲಿ ಬಂದಿರುವ ವಿಷಯವೇನಲ್ಲ ನನಗೂ ಟೆಲಿಗ್ರಾಂ ಅಲ್ಲಿಂದ ಬಂದಿದೆ. ಮಾನ್ಯ ಮಿತ್ರರಿಗಿಂತ ನನಗೆ ಜಾಸ್ತಿ ವಿಷಯಗಳು ತಿಳಿದಿವೆ. ಇದಕ್ಕೆ ಸಂಬಂಧಪಟ್ಟ ಜಿಲ್ಲೆಯವರಿಗೂ ನಮಗಿಂತಲೂ ಹೆಚ್ಚಿಗೆ ಗೊತ್ತಿರಬಹುದು. ಅವರೂ ಸಹ ಹೇಳಲಿ ಆದರ ಬಗ್ಗೆ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದು ಚೆನ್ನಾಗಿ ಗೊತ್ತಾಗುತ್ತದೆ ಗ್ರಾವಿಟಿ ಆಫ್ ಡಿಸಕಷನ್ ಮೇಲೆ ತಿಪ್ಪೆ ಸಾರಿಸುವ ರೀತಿ ಮಾಡಿದರೆ, ಅದಕ್ಕೆ ನಾವು ಇಲ್ಲಿ ತಯಾರಾಗಿಲ್ಲ. ಹಿಂದೆ ಈ ತರಹ ಪ್ರಶ್ನೆಗಳು ಬಂದಾಗಲೆಲ್ಲಾ ಸರ್ಕಾರದವರು ಅವರಲ್ಲಿರತಕ್ಕ ಸ್ಟಾಕ್ ಉತ್ತರವನ್ನು ಕೊಡುತ್ತಾರೆ ಅದೇನೆಂದರೆ, ಪರಿತೀಲನೆಯಲ್ಲಿದೆ. ಪೋಲೀಸರಿಂದ ತನಿಖೆ ನಡೆಸುತ್ತಿದ್ದೇವೆ, ರಿಪೋರ್ಟ್ ತರಿಸಲಾಗುತ್ತಿದೆ, ಅಧಿಕಾರಿಗಳಿಗೆ ಕಳುಹಿಸಿದ್ದೇವೆ, ಕೇಸ್ ಹಾಕಿದ್ದೇವೆ, ಕೇಸ್ ಹೈಕೋರ್ಟಿನಲ್ಲಿದೆ, ಆದರ ಬಗ್ಗೆ ಮಾತನಾಡಬೇಡಿ ಎಂದು. ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ನಮ್ಮನ್ನು ನಂಬಿ ಎಂದು.

SRI H. M. CHANNABASAPPA : It is open to the hon. member to pass on their opinions to us. The discussion does not increase the volume of the evidence. But, if discussion is going to help, I should not come in the way. If it is a matter on which you want to express yourself I would not come in the way if the Speaker permits. I only made an appeal to you to consider this aspect, and it may not be a very healthy tradition also. If you still persist you want to speak and exercise your right, I would not come in the way if the Speaker permits.

ಅಧ್ಯಕ್ಷರು.— ಹೀಗೆ ವಿಕಕಾಲಕ್ಕೆ ೪-೫ ಜನ ನಿಂತುಕೊಂಡರೆ ನಾನು ಯಾರು ಹೇಳುವುದನ್ನು ಕೇಳಬೇಕು? ಇದೇಕೆ ಹೀಗೆ ಮಾಡುತ್ತಿದ್ದೀರಿ?

3-30 P. M.

ಶ್ರೀ ಎಂ. ಎಸ್. ಕೃಷ್ಣನ್.— ನನಗೆ ತಾವು ಅನಂತರ ಮಾತನಾಡುವುದಕ್ಕೆ ಅವಕಾಶ ಕೊಡಂವು ದಾದರೆ ನಾನು ಈಗ ಕುಳಿತುಕೊಳ್ಳುವುದಕ್ಕೂ ಸಿದ್ದ.

ಅಧ್ಯಕ್ಷರು.— ಶ್ರೀಮಾನ್ ದೇವೇಗೌಡರು ಒಂದು ವಿಷಯ ಸಭೆಯ ಮುಂದೆ ಎತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರೇನು ಹೇಳುತ್ತಾರೆಂಬುದನ್ನು ಕೇಳದೆ ವಿಷಯವನ್ನು ಸಭೆಯಲ್ಲಿ ಚರ್ಚೆಮಾಡುವುದಕ್ಕೆ ಅವಕಾಶವೆಲ್ಲಿದೆ?

ಶ್ರೀ ಪಾಟಾಳ್ ನಾಗರಾಜ್.— ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ವಿಚಾರ.

ಅಧ್ಯಕ್ಷರು.— ಇದನ್ನು ಶ್ರೀ ದೇವೇಗೌಡರು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಹಾಗೆ ತಾವೂ ಕೂಡ ಬರವಣಿಗೆಯಲ್ಲಿ ಒಂದು ನೋಟೀಸ್ ಕಳುಹಿಸಿ, ಆಗ ನಿಮಗೂ ಅವಕಾಶ ಸಿಕ್ಕುತ್ತೆ.

ಶ್ರೀ ಪಾಟಾಳ್ ನಾಗರಾಜ್.—ಇದು ಬಹಳ ಗುರುತರವಾದ ವಿಷಯ. ಪೋಲೀಸಿನವರು ಇಲ್ಲಿಯ ತನಕ ಯಾರೊಬ್ಬರನ್ನೂ ಸಸ್ಪೆಂಡ್ ಮಾಡಿಲ್ಲ.

ಅಧ್ಯಕ್ಷರು.— ನಿಮಗೂ ಮಾತನಾಡುವುದಕ್ಕೆ ಅನೇಕ ಮಾರ್ಗಗಳು ಇವೆ. ಆಗ ಮಾತನಾಡಿ.

ಶ್ರೀ ಕೆ. ಎಫ್. ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಆ ಹುಡುಗನನ್ನು ಎರಚಾವರ್ತಿ ಮನೆಗೆ ಕರೆದುಕೊಂಡು ಹೋಗಿದ್ದರೆಂದು ಹೇಳಿದ್ದಾರೆ. ಒಂದಾವರ್ತಿ ಆಸ್ಪತ್ರೆಗೂ ಮತ್ತು ಒಂದಾವರ್ತಿ ಮನೆಗೂ ಕರೆದುಕೊಂಡು ಹೋಗಿದ್ದರೆಂದು. ಅದನ್ನು ಸಭೆ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಕೆ. ಬಿ. ಕೋಳಿವಾಡ.— ವಿರೋಧ ಪಕ್ಷದ ಸದಸ್ಯರುಗಳು ಟೆಲಿಗ್ರಾಂ ಬಂದುದರ ಮೇಲೋ ಇಲ್ಲವೇ ಟೆಲಿಫೋನ್ ಮೇಲೆ ಮಾತನಾಡಿದ್ದರ ಮೇಲೋ ಅಥವಾ ಪತ್ರಿಕೆಗಳಲ್ಲಿ ಬಂದ ವರದಿಯ ಮೇಲೋ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.— ಅದೇನೇ ಇರಲಿ. ಶ್ರೀ ದೇವೇಗೌಡ ಅವರು ಸಭೆಯಲ್ಲಿ ಒಂದು ಪಾಯಿಂಟನ್ನು ರೈಜ್ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರ ಏನು ಹೇಳುತ್ತದೋ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನೂ ಕೂಡ ರೂಲ್ ೩೧೨ರ ಪ್ರಕಾರ ಒಂದು ನೋಟೀಸ್ ಕಳಿಸಿದ್ದೇನೆ.

ಅಧ್ಯಕ್ಷರು.— ಆದರೆ ಅದೇ ವಿಚಾರವನ್ನು ಶ್ರೀ ದೇವೇಗೌಡರು ಎತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ದೇವೇಗೌಡರು ಫ್ಯಾಕ್ಟ್ಸ್ ಬಗ್ಗೆ ಕೆಲವು ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಇದರಲ್ಲಿ ಒಂದು ಬಹಳ ಪ್ರಾಮುಖ್ಯವಾದ ವಿಚಾರವಿದೆ.

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).— ಫ್ಯಾಕ್ಟ್ಸ್ ಎಂದರೇನು?

SRI C. M. ARMUGAHM.— I have got one submission to make. Sri Chennabasappa in a very diplomatic way wanted toprevent the further discussion on this matter.

SRI H. SIDDAVEERAPPA.—When the matter is sub-judice, how can anybody be allowed to talk on this subject?

SRI H. S. SIDDAPPA.— The matter is not sub-judice. If you want to gain time, you can do so.

SRI C. M. ARMUGHAM.— The point at issue is: that the boy was taken to the Police Station and beaten. But the Police have rushed to the Press and issued a statement. The statement is to the effect that there is no unnatural death. They have established this fact.

You have allowed the Police to rush to the Press and issue a statement saying that they are not at fault. Nowadays it has become a practice for the Police whether they are in Bangalore or outside, they rush to to the Press and issue a statement. They have done a similar thing in this case also.

SRI K. B. KOLIVAD.— He has not added anything to the statement made by Sri Deve Gowda.

SRI C. M. ARMUGHAM.— The police by issuing a press statement have taken enough precaution to protect themselves and they have tried to safeguard their interest to hide the facts. Besides, they have obtained a statement from the Doctor and the mother of that boy. The Government has not issued a contradictory statement. Therefore there is nothing wrong inexpressing our views on the floor of the House.

ಶ್ರೀ ಕೆ. ಬಿ. ಕೋಳಿವಾಡ.— ಆ ಸತ್ತ ಹುಡುಗನನ್ನು ಅವರು ಕರೆಸಿ ಕೇಳಿದಾಗ.

ಶ್ರೀ ವಾಟಾಳ್ ನಾಗರಾಜ್.— ಸತ್ತ ಹುಡುಗನನ್ನು ಅವರು ಹೇಗೆ ಕರೆಸಿದರು ?

ಶ್ರೀ ಎಂ ಎಸ್. ಕೃಷ್ಣನ್.—ಸತ್ತಹುಡುಗನನ್ನು ಕರೆಸುವುದು ಎಲ್ಲಿಯಾದರೂ ಇವರಿಗೆ ಸಾಧ್ಯವೇ?

ಅಧ್ಯಕ್ಷರು.— ಅವರ ಭಾಷೆ ನಮಗೆ ಅರ್ಥವಾಗಿಲ್ಲ-ಅಷ್ಟೇ. ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ. ಬಿ. ಕೋಳಿವಾಡ.—ಇದೇ ವಿಚಾರದಲ್ಲಿ ರಾಣೇಬೆನ್ನೂರಿನಲ್ಲಿ ಮೂರು ನಾಲ್ಕು ಅಭಿಪ್ರಾಯ ಗಳಿವೆ. ನಾನು ಆ ಅಭಿಪ್ರಾಯಗಳನ್ನು ತಿಳಿಸಿದ ನಂತರ ನನ್ನಸ್ವಂತ ಅಭಿಪ್ರಾಯ ಇದರ ಬಗ್ಗೆ ಏನೆಂಬುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ಪೋಲೀಸರ ಅಭಿಪ್ರಾಯ ಹೇಳುತ್ತೇನೆ. ಅವರನ್ನು ಗಲಭೆಯ ವಿಚಾರವೇನು ಎಂದು ಕೇಳಿದಾಗ ಸತ್ತುಹೋಡ ಹುಡುಗ ತನ್ನಸೈಕಲ್ಲನ್ನು ರಿಪೇರಿಗೆ ಕೊಟ್ಟಿದ್ದುದಾಗಿಯೂ ಅಲ್ಲಿಹ್ಯಾಂಡಲ್ ಬದಲು ಮಾಡಿದ್ದಾರೆಂದು ಹೇಳಿದ, ಅದನ್ನು ತೋರಿಸು ಎಂದು ಹೇಳಲಾಯ್ತು, ತೋರಿಸುತ್ತೇನೆಂದು ಹೇಳಿದ ಎಂದು ತಿಳಿಸಿದರು ನಂತರ ದಾರಿಯಲ್ಲಿ ಬಿದ್ದು ಸತ್ತ ಎಂದು ತಿಳಿಸಿದರು. ಶುಕ್ರವಾರ ರಾಣೆ ಬೆನ್ನೂರಿಗೆ ಹೋಗಿ ಹುಡುಗನ ಮನೆಯಲ್ಲಿ ಅವರ ತಾಯಿಯನ್ನು ವಿಚಾರಮಾಡಲಾಗಿ ಪೋಲೀಸರು ಹೊಡೆದಿರುವಂತೆ ಕಾಣುವುದಿಲ್ಲ, ಆದರೆ ವಿಷ ಹಾಕಿದ್ದಾರೆಂಬ ಸಂಶಯವಿದೆ ಎಂದು ತಿಳಿಸಿದರು. ಅಲ್ಲದೆ ಪೋಲೀಸ್ ಕೇರಿಯಲ್ಲಿ ೧೫-೨೦ ನಿಮಿಷ ಇದ್ದ, ಹೊಡೆದರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳಿದರು. ಪೋಸ್ಟ್‌ಮಾರ್ಟಂ ಮಾಡುವ ವೇಳೆಯಲ್ಲಿ ಹುಡುಗನ ಮಾವ ಇದ್ದ. ಆತ ಎಂಬಿಬಿಎಸ್ ಓದುತ್ತಿದ್ದ. ಆ ಹುಡುಗನ ಮಾವ ಹೇಳುವುದು ಹೊಡೆದಿರಬೇಕು, ಆದರೆ ಅದನ್ನ ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ ಎಂದು. ಅಲ್ಲದೆ ಪೊಲೀಸರ ಬಗ್ಗೆ ಅಷ್ಟು ಸಂಶಯವಿಲ್ಲ ಎಂದು ಹುಡುಗನ ಅಕ್ಕನ ಗಂಡನಾದ ಎಂಬಿಬಿಎಸ್ ಓದುವ ಮಾವ ಅಭಿಪ್ರಾಯಪಟ್ಟಿದ್ದಾರೆ. ನಂತರ ಜನರ ಅಭಿಪ್ರಾಯವಿರುವುದು ಪೋಲೀಸರು ಹೊಡೆದು ಮನೆಯವರಿಗೆ ಹಣ ಕೊಟ್ಟು ಒಳಗೆ ಹಾಕಿಕೊಂಡು ತಾವೇನೂ ಮಾಡಿಲ್ಲವೆಂಬಂತೆ ವರ್ತಿಸುತ್ತಿದ್ದಾರೆ ಎಂದು ಸರಕಾರ ಎನ್‌ಕ್ವೈರಿ ಮಾಡಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಎಂ.ಎಸ್. ಕೃಷ್ಣನ್.- ಮಾನ್ಯ ಸದಸ್ಯರು ಎನ್‌ಕ್ವೈರಿ ಮಾಡಬೇಕೆಂದೇನು ಎಲ್ಲರ ಅಭಿಪ್ರಾಯ ವಿದೆ ಅದನ್ನು ಪುಷ್ಟೀಕರಿಸಿದ್ದಾರೆ ಶ್ರೀ ದೇವೇಗೌಡರವರಿಗೆ ಪೋಲೀಸ್ ಸ್ಟೇಷನ್ನಿನಲ್ಲಿ ಏಟು ತಿಂದು ಅನುಭವ ಇಲ್ಲ, ನಾನು ತಿಂದಿದ್ದೇನೆ ಸರ್ಕಾರವೇನು ಮಾಡುವುದು ಎಂಬುದು ನನಗೆಗೊತ್ತಿದೆ. ಮುನಿಚಂದ್ರನ ವಿಚಾರ ದಲ್ಲಿ ಹಿಂದೇನಾಯ್ತು ಎಂಬುದು ಗೊತ್ತಿದೆ, ಹಿಂದೆ ಗಲಭೆಯಾದಾಗ ಆಟೋರಿಕ್ಷ ಡ್ರೈವರನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಹೊಡೆದು ಕೊಂದುಹಾಕಿದರು ಅದೇ ರೀತಿ ಈ ಸಂದರ್ಭದಲ್ಲೂ ಮಾಡಿದ್ದಾರೆಂಬ ವರ್ತ ಮಾನವಿದೆ. ಆ ಹುಡುಗ ಒಳ್ಳೆಯ ವಿದ್ಯಾರ್ಥಿಯಾಗಿದ್ದು, ಒಳ್ಳೆಯ ನಡತೆ ಇತ್ತು. ಅಲ್ಲದೆ ಅವನ ತಾಯಿ ಬಡವರು, ಆಕೆಯ ಹೆಣ್ಣುಮಕ್ಕಳು ಸಹ ಗ್ರಾಜುಯೇಟ್ಸ್, ವಿದ್ಯಾವಂತರು ಎಂಎಲ್‌ಎ ಮತ್ತು ಎಂಎಲ್‌ಸಿಗಳು ಸಹ ಹೋಗಿ ಮಾತನಾಡಿಕೊಂಡು ಬಂದಿದ್ದಾರೆ. ಇಂಥ ಪರಿಸ್ಥಿತಿ ಇದೆ ಪೋಲೀಸ್ ಸ್ಟೇಷನ್ನಿನಲ್ಲಿ ವಿಕಾವಿಕಿ ಹೊಡೆಯುವುದು ನ್ಯಾಯವೇ? ಹೊಡೆದರು ಎಂಬ ವರ್ತಮಾನವಿದೆ, ಹೊಡೆ

(ಶ್ರೀ ಎಂ. ಎಸ್. ಕೃಷ್ಣನ್)

ದಿದ್ದಾರೆ ಎಂದ ಸಂಶಯವಿದೆ. ವರ್ತಮಾನ ಪತ್ರಿಕೆಯ ಪ್ರಕಾರ ಪೋಲೀಸ್ ಸ್ಟೇಷನ್ ಹೊರಗಡೆ ಬಂದ ತಕ್ಷಣ ಸ್ವಲ್ಪ ಹೊತ್ತಿನಲ್ಲೇ ಮೃತನಾದ ಎಂದು ಕನ್ನಡ ಪ್ರಭಾದಲ್ಲಿ ವರದಿ ಮಾಡಿದಾರೆ. ಪೋಲೀಸರು ಹೇಳಿಂವುದು ಸ್ಟೇಷನ್ ಹೊರಗೆ ಬಂದ ತಕ್ಷಣ ಸತ್ತ ಎಂದು. ತಕ್ಷಣ ಸಾಯಬೇಕಾದರೆ ದಾರಿಯಲ್ಲಿ ವಿಷ ಕುಡಿದನೆ? ಸ್ಟೇಷನ್ನಿಗೆ ಹೋದ ತಕ್ಷಣ ಫಿಟ್ಸ್ ಬಂತು ಎಂದು ಹೇಳ್ತಾರೆ. ಆದರೆ ಫಿಟ್ಸ್ ಬಂದರೆ ತಕ್ಷಣ ಸಾಯಂವುದಿಲ್ಲ, ಹಾಗೆ ಸಾಯಲು ಅವಕಾಶವಿಲ್ಲ, ಔಷಧಿ ಕುಡಿಸುವರು. ಕಬ್ಬಿಣ ಕೊಟ್ಟರೆ ಫಿಟ್ಸ್ ನಿಲ್ಲುವುದು ಎಂಬುದು ಗೊತ್ತಿರಬಹುದು. ಮೂರನೇ ವಿಚಾರ ಬಹಳ ಮುಖ್ಯವಾದುದು. ಸತ್ತು ಅರ್ಧ ಗಂಟೆಯೊಳಗೆ ಪೋಸ್ಟ್ ಮಾರ್ಟಂ ಮುಗಿಸಿದರು. ಇಷ್ಟು ಬೇಗ ಹೇಗೆ ಮುಗಿಸಿದರು? ಇದನ್ನು ನೋಡಿದರೆ ಅನುಮಾನ ಬರುವುದು.

ಶ್ರೀ ಎಚ್. ಡಿ. ದೇವೇಗೌಡ.— ಶ್ರೀ ಸಿದ್ಧವೀರಪ್ಪನವರು ಹಿಂದೆ ಈ ಜಾಗದಲ್ಲಿದ್ದಾಗ ಪೋಲೀಸ್ ಎಕ್ಸೆಸ್ ಬಗ್ಗೆ ಅಧ್ಯಕ್ಷರು ಅನುಮತಿ ಕೊಡದಿದ್ದರೂ ಎದ್ದೆನ್ನು ಹಾರುತ್ತಿದ್ದರು. ಈಗ ನಮ್ಮ ಮಿತ್ರರು ಮಾತನಾಡುವಾಗ ಅಡ್ಡಿ ಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.— ನಾನು ಅರ್ಥಗರ್ಭಿತವಾಗಿ ಹಾರುತ್ತಿದ್ದೆ.

ಶ್ರೀ ಎಚ್. ಡಿ. ದೇವೇಗೌಡ.— ಅವರು ಆರೋಗ್ಯ ಸಚಿವರಾದ ಮೇಲೆ ಮೂರು ನಾಲ್ಕು ಆಸ್ಪತ್ರೆಗಳಲ್ಲಿ ಸತ್ತ ಒಂದೂವರೆ ದಿವಸವಾದಮೇಲೆ ಪೋಸ್ಟ್‌ಮಾರ್ಟಂ ಮಾಡಿರುವುದಾಗಿ ಪತ್ರಿಕೆಯಲ್ಲಿ ಬಂದಿರುವುದಂಟು.

ಶ್ರೀ ಎಂ. ಎಸ್. ಕೃಷ್ಣನ್.— ಅನುಮಾನ ಬಂದು ಹೇಳಿದಮೇಲೆ ಮಾಡಿರುವುದಂಟು. ಆ ಮಾತು ಬೇಡ, ಮೂರನೆ ಪ್ರಶ್ನೆ ಇದೆ, ಅದಕ್ಕೆ ಉತ್ತರ ಬೇಕು. ಪೋಲೀಸ್ ಹೇಳಿಕೆ ಕೊಟ್ಟಿದ್ದಾರೆ. ಅದಿರಲಿ, ಪೋಲೀಸರಮೇಲೆ ಕ್ರಿಮಿ ಕೈಕೊಂಡಿದ್ದೀರಾ?

SRI H. M. CHANNABASAPPA.— It looks as though the case is for hearing and there is cross-examination.

SRI M.S. KRISHNAN.— I know what to ask. I know as much law as you know.

SRI H.M. CHANNABASAPPA.— I have been appealing to you, we are as much anxious as you are in the matter. Before even I make a statement you want so many things and cross-examine here. Are we to be cross-examined ?

SRI C. M. ARUMUGHAM.—You want to defend the Police Officers. we have got every right to cross-examine the Government.

SRI H. M. CHANNABASAPPA — I have not said a word about it.

ಶ್ರೀ ಕಾಗೋಡು ತಿಮ್ಮಪ್ಪ.— ಅದು ಪೋಲೀಸ್ ಸ್ಟೇಟ್‌ಮೆಂಟ್. 'Following are the details of yesterday's incident according to Police sources here: ಎಂದು ಪತ್ರಿಕೆಯಲ್ಲಿ ಬಂದಿದೆ, That is what it says.

SRI M. S. KRISHNAN — There is a headline in the DECCAN HERALD which say: 'No unnatural death of student-say the Police.'

SRI H. M. CHANNABASAPPA.— I am not here to defend anybody, whether he is a Policeman or non-Policeman. On what Obligation should I do so? Government is not here to defend all people who do wrong.

ಶ್ರೀ ಎಂ. ಎಸ್. ಕೃಷ್ಣನ್. — ಮಾನ್ಯ ಚನ್ನಬಸಪ್ಪನವರು ಪೋಲೀಸಿನವರು ಹೇಳಿಕೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ನಾನು ಓದುತ್ತೇನೆ.

"Death of Melmalagi, a College student at Ranibennur was not under unnatural or suspicious circumstances—claims a statement issued by the Police on the student's death onFriday," This is whant it sayes. It has appeared in DECCAN HERALD. Under the circumstances, let not the Hon. Minister say that the Police have not issued a statement. We get suspicious of the Police because they are running Post haste to issue a statement. It is the duty of the Police to investigate and make a report to the Government come here and say. they are well within their right'. They cannot rush and issue a statement. What does it mean ? They want to cover up the whole thing. Whatever has happened is covered up I would request the Hon. Minister not to shield the Police in this respect.

ಅಧ್ಯಕ್ಷರು.— ತಾವು ಮಾತನಾಡಿರುವುದನ್ನು ತೆಗೆದು ಓದಿ ನೋಡಿ ಅದನ್ನೇ ರಿಪೀಟ್ ಮಾಡಿದ್ದೀರಾ

SRI M. S. KRISHNAN :— There is interruption by the Hon. Minister. Nobody has been kept under suspension. I would like to say from what we have come to know from our own experience, in regard to such incidents in the past including even the recent one at Gulbarga' that they must conduct an enquiry and a thorough probe. Whatever the manner in which they want to do it, let there be an impartial probe and let the truth come out. Whether it is Police Officials or whoever it is Should be punished very severely. This is my humble opinion, They must give some-relief to the family of the person who is dead.

ಶ್ರೀ ವಾಟಾಳ್ ನಾಗರಾಜ್,— ಈ ಸಭೆಯಲ್ಲಿ ಮಾನ್ಯ ಚನ್ನಬಸಪ್ಪನವರಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಏಕೋ ಅವರು ನಮ್ಮ ಮೇಲೆ ಸಿಟ್ಟಾಗುತ್ತಿದ್ದಾರೆ. ನಿಮ್ಮ ಬಗ್ಗೆ ಗೌರವ ಇದೆ. ಕೆಲವು ವಿಷಯ ಬಂದಾಗ ನಿರ್ಧಾಕ್ಷಿಣವಾಗಿ ಹೇಳಿಕೆಯನ್ನು ಕೊಡುತ್ತಾರೆ. ಈಗ ಮಾತೆತ್ತಿದರೆ ಎದ್ದು ಎದ್ದು ನಿಂತುಕೊಳ್ಳುವುದನ್ನು ನೋಡಿದರೆ ಭಯವಾಗುತ್ತದೆ. ಪೋಲೀಸರ ಬಗ್ಗೆ, ಪೋಲೀಸ್ ಖಾತೆಯ ಕರ್ಮಕಾಂಡದ ಬಗ್ಗೆ ಮಾತನಾಡುತ್ತೇವೆ. ಮೊನ್ನೆ ಗುಲ್ಬರ್ಗದಲ್ಲಿ ಆದ ಇನ್‌ಸಿಡೆಂಟ್‌ನಲ್ಲಿ ಪೋಲೀಸರ ಬಗ್ಗೆ ಹೇಳಿದರೆ, ಮಾನ್ಯ ಸಚಿವರು ನಾವು ಎಲ್ಲವನ್ನೂ ಸಂಪೂರ್ಣವಾಗಿ ತನಿಖೆ ನಡೆಸುತ್ತೇವೆ. ಎಂದು ಹೇಳುವುದೂ ಈ ಮಂತ್ರಿಮಂಡಲದ ಸ್ಲೋಗನ್ ಆಗಿದೆ. ಯಾರನ್ನೇ ಪೋಲೀಸ್ ಸ್ಟೇಷನ್ ಗೆ ಲಾಕಪ್‌ಗೆ ಕರೆದುಕೊಂಡು ಹೋಗಲಿ, ಅವರಿಗೆ ಗಿಡ್ಡಿನೆಸ್ ಇದೆ, ಫಿಟ್ಸ್ ಇದೆ ಎನ್ನುವುದು ಅವರ ಸ್ಲೋಗನ್ ಆಗಿದೆ, ವಾಂತಿ ಬಂದು ಸತ್ತು ಹೋದರು ಎಂದೂ ಹೇಳುವುದೂ; ಈ ಪ್ರಯೋಗ ಪೋಲೀಸಿನವರದ್ದು ಆಗಿದೆ. ಇದು ಸೀರಿಯಸ್ ಆದಂಥ ಪ್ರಶ್ನೆ, ಗುರುತರವಾದ ಪ್ರಶ್ನೆ; ಸರ್ಕಾರ ಯಾವ ಪೋಲೀಸ್ ಅಧಿಕಾರಿಯನ್ನೂ ಮುಚ್ಚುಮರೆ ಇಲ್ಲದೆ ಸಂಪೂರ್ಣವಾಗಿ ತನಿಖೆ ನಡೆಸಬೇಕು. ತನಿಖೆ ನಡೆಸುತ್ತೇವೆಂದು ಪ್ರತಿಸಾರಿಯೂ ಹೇಳಿದ್ದೂ ಆಗಿದೆ. ಮುಖ್ಯಮಂತ್ರಿಗಳು ಹೇಳಬೇಕಾದಂಥ ಹೇಳಿಕೆಯನ್ನು ಬೇರೆಯವರು ಮಾಡಿದ್ದಾರೆ. ಮುಖ್ಯಮಂತ್ರಿಗಳ ಮಾತನ್ನು ಲೆಕ್ಕಕ್ಕೆ ಇಡದೆ ಐ ಜಿ ಪಿ ಯವರು ಪತ್ರಿಕಾ ಕರ್ತರನು ಕರೆದು ಹೇಳಿಕೆ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳಿಂದ ಈ ಹೇಳಿಕೆ ಇರಬೇಕಾಗಿತ್ತು, ಆದರೆ ಮುಖ್ಯಮಂತ್ರಿಗಳು ಕೊಡಲಿಲ್ಲ; ಹೊರಗಡೆ ರಬ್ಬರ್ ಸ್ಟ್ಯಾಂಪ್ ಐ ಜಿ ಪಿ ನಮ್ಮಲ್ಲಿದ್ದಾರೆ. ಹಿಂದೆ ಯಾವಾಗಲೂ ಇಂಥ ಐ ಜಿ ಪಿ ಬರಲಿಲ್ಲ. ದಕ್ಷತೆಗಿಂತ ಹೆಚ್ಚಾಗಿ ಒಳ್ಳೆಯತನ ಜಾಸ್ತಿಯಾಗಿದೆ. ಮಾನ್ಯ ಚನ್ನಬಸಪ್ಪನವರ ಮೇಲೆ ನಾವು ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ, ತಾವು ಈ ಫ್ಲೋರ್‌ನಲ್ಲಿ ಸರಿಯಾದ ಹೇಳಿಕೆ ಕೊಡಬೇಕು.

ಅಧ್ಯಕ್ಷರು.— ಸರಿಯಾದ ಹೇಳಿಕೆ ಎಂದರೆ ಹೇಗೆ? ನಿಮ್ಮ ಇಷ್ಟ ಬಂದ ಹಾಗೆಯೇ?

ಶ್ರೀ ವಾಟಾಳ್ ನಾಗರಾಜ್.— ನೀವು ಕೊಟ್ಟ ಹೇಳಿಕೆಯನ್ನು ಜನಗಳು ಒಪ್ಪಬೇಕು. ಮಂಜುನಾಥ್ ಪ್ರಕರಣ, ಮುನಿಚಂದ್ರನ ಪ್ರಕರಣ ಏನಾಯಿತು? ಎಲ್ಲವೂ ಮುಚ್ಚಿ ಹೋಯಿತು, ಇದು ಪೋಲೀಸ್ ಇಲಾಖೆಯಲ್ಲಿ ನಡೆದಿದೆ. ನಾವು ಒಪ್ಪತಕ್ಕ ಹೇಳಿಕೆಯಲ್ಲ ಜನರು ಒಪ್ಪತಕ್ಕ ಹೇಳಿಕೆಯನ್ನು ಮುಖ್ಯ ಮಂತ್ರಿಗಳು ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ,

ಶ್ರೀ ಬಿ. ವಿ. ಕಕ್ಕಿಲ್ಲಾಯ.— ಎನ್‌ಕ್ವೆಯರಿ ಏನು ಮಾಡುವುದು ಇದ್ದರೂ ಕೂಡ ಪೋಲೀಸರು ಸ್ಟೇಟ್‌ಮೆಂಟ್ ಕೊಟ್ಟಿರುತ್ತಾರೆ, ಮತ್ತು ಅದನ್ನು ಅವರು ಮುಚ್ಚಲಿಕ್ಕೆ ಪ್ರಯತ್ನ ಪಡುತ್ತಾರೆ. ಪೆಂಡಿಂಗ್ ಎನ್‌ಕ್ವೆಯರಿ ಅಲ್ಲಿರುವ ಪೋಲೀಸ್ ಅಧಿಕಾರಿಗಳನ್ನು ಗುಲ್ಬರ್ಗದಲ್ಲಿ ಯಾವತೀತಿ ಸಸ್ಪೆನ್‌ಷನ್‌ನಲ್ಲಿಟ್ಟಿರೋ ಅದೇ ರೀತಿ ಇಲ್ಲಿಯೂ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸೆಕ್ಷನ್ ೧೧೪ ಹಾಕಿ ಜನರ ಬಾಯಿ ಮುಚ್ಚಿದರೆ ಪ್ರಶ್ನೆ ಪರಿಹಾರವಾಗುವುದಿಲ್ಲ. ಕೂಡಲೇ ತಾತ್ಕಾಲಿಕವಾಗಿ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.— ಇದನ್ನು ಮಂತ್ರಿಗಳ ಗಮನಕ್ಕೆ ತರಬೇಕು ಎಂದು ನನ್ನ ಇಚ್ಛೆಯಾದರೂ ಇಷ್ಟೆ, ಪ್ರೆಸ್‌ನಲ್ಲಿ ರಿಪೋರ್ಟ್ ಏನಾಗಿದೆ, ಅದರ ಹಿನ್ನೆಲೆಯನ್ನು ನಾವು ಸೂಕ್ಷ್ಮವಾಗಿ ಪರಿಶೀಲನೆ ಮಾಡುವುದು ಅವಶ್ಯಕ ಇದೆ. 'ಮೇಲ್ ಮಾಳಿಗೆಯನ್ನು ಪೋಲೀಸರು ಖುದ್ದಾಗಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿ ಚಿಕಿತ್ಸೆ ನಡೆಸಿ, ಮನೆಗೆ ಬಿಟ್ಟರು' ಎಂದು ಪತ್ರಿಕೆಯಲ್ಲಿ ವರದಿಯಾಗಿರುವುದು. ಮತ್ತೆ ಸೈಕಲ್ ಹ್ಯಾಂಡಲ್ ಬೇರೆ ಇದೆಯೆಂದು ಆತ ಹೇಳಿದಾಗ ಅದನ್ನು ತರಬೇಕು ಎಂದು ತಿಳಿಸಲಾಯಿತೆಂದೂ, ಮನೆಗೆ ಹೋದ ಆತ ಅಲ್ಲಿಯೇ ಸತ್ತನೆಂದು ಪೋಲೀಸರು ವರದಿ. There are two versions given by the Police Officers ಪೋಲೀಸರ್ ಹಿಡಿದ ಮೇಲೆ ಚಿಕಿತ್ಸೆ ಮಾಡಿಸಿ ಮನೆಗೆ ಬಿಟ್ಟರು ಎನ್ನುವುದು ಒಂದು ವರ್ಷನ್ ಇನ್ನೊಂದು ವರ್ಷನ್ ಸೈಕಲ್ ಹ್ಯಾಂಡಲ್ ಬೇರೆ ಇದೆ ಎಂದು ಅವನು ಹೇಳಿದಾಗ, ತರಬೇಕೆಂದು ಹೇಳಲಾಯಿತು, ಮನೆಗೆ ಹೋದಾಗ ಅವನು ಅಲ್ಲಿಯೇ ಸತ್ತನೆಂದು. ಅಧಿಕಾರಿಗಳು ಅವನಿಗೆ ಮೂರ್ಛೆ ರೋಗ ಬರುತ್ತಿತ್ತೆಂದು ತಿಳಿಸಿದ್ದಾರೆ. ಇದನ್ನು ರಾಣಿಬೆನ್ನೂರಿನ ಪೋಲೀಸ್ ಅಧಿಕಾರಿ ಹೇಳಿದ್ದಾರೆ. ಅವರ ಜೊತೆಗೆ ಬೆಂಗಳೂರು ಸೀನಿಯರ್ ಆಫೀಸರ್ ಐ ಜಿ ಪಿ, ಡಿ ಐ ಜಿ ಯವರೂ ಕೂಡ ಇದನ್ನು ಸಮರ್ಥನೆ ಮಾಡಿದ್ದಾರೆ. ಅನ್‌ನ್ಯಾಚುರಲ್ ಡೆತ್‌ನಿಂದ ಸತ್ತಿಲ್ಲ, ನ್ಯಾಚುರಲ್ ಡೆತ್‌ನಿಂದ ಸತ್ತಿದ್ದಾನೆಂದೂ ಅವರು ಹೇಳಿಕೆ ಕೊಟ್ಟಿದ್ದಾರೆ.

4. 00 P. M.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಾನ್ಯ ಅಧ್ಯಕ್ಷಣಿಯವರೇ, ಈ ರಾಣಿಬೆನ್ನೂರಿನಲ್ಲಿ ನಡೆದಿರತಕ್ಕ ಘಟನೆ ವಿಷಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರು ನಮಗೆ ಇದರಲ್ಲಿ ನ್ಯಾಯ ದೊರಕಬೇಕು ಎನ್ನುವ ಒಂದು ಘನಾಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ನಾವು ಹೇಳುವುದಾದರೂ ಇಷ್ಟೆ. ಆ ಬಗ್ಗೆ ನೀವು ನಾವು ಒಕ್ಕೊರಲಿನಿಂದ ಹೇಳತಕ್ಕ ವಿಷಯ ಇದು ಆಗಿದೆ. ಆದುದರಿಂದ ಅರಸಿನ ಕಾವಲಿಲೆ ರೋಗ ಬಂದರೆ ಯಾವ ರೀತಿ ಎಲ್ಲೆಲ್ಲಿ ಹಳದಿಯಾಗಿರುತ್ತದೋ ಅದೇ ರೀತಿ ನಾವುಗಳು ಹೇಳುವುದನ್ನು ಆ ದೃಷ್ಟಿಯಲ್ಲಿ ನೋಡುತ್ತಿದ್ದೀರಿ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ ಈ ಸಭೆಯಲ್ಲಿ ನಾನು ಅನೇಕವೇಳೆ ಹೇಳಿದ್ದೇನೆ. ವಿರೋಧಪಕ್ಷದವರು ನಮಗೆ ಸಹಾಯಕರು ಎಂದು. ನಮ್ಮ ವರ್ಚಸ್ಸು ಬೆಳೆಯಬೇಕಾದರೆ ತಮ್ಮಗಳಿಂದ, ತಾವು ನಾವು ಏನು ತಪ್ಪುಸಪ್ಪುಗಳನ್ನು ಮಾಡುತ್ತೇವೆ ಎಂದು ಕಂಡು ಹಿಡಿದು, ಸರ್ಕಾರದಲ್ಲಿ ಎಲ್ಲೆಲ್ಲಿ ಏನೇನು ಲೋಪದೋಷಗಳು ಇವೆ ಅವುಗಳನ್ನು ಎತ್ತಿ ಹಿಡಿದು ತೋರಿಸುವುದರಿಂದ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಮಗೆ ಸಹಾಯವಾಗುತ್ತದೆ, ಆ ದೃಷ್ಟಿಯಲ್ಲಿ ತಮಗೆ ನಾವು ಯಾವತ್ತೂ ಚಿರಋಣಿಗಳಾಗಿರಬೇಕು. ನಮ್ಮ ವರ್ಚಸ್ಸು ಬೆಳೆಯಬೇಕಾದರೆ ನಿಮ್ಮ ಸಹಾಯ ಬೇಕಾಗುತ್ತದೆ.

ಶ್ರೀ ಎಂ. ಎನ್. ಕೃಷ್ಣನ್ — ಇದೇ ರೀತಿಯಾಗಿ ತಾವು ಹೇಳುತ್ತಾ ಇರಬಹುದು, ನಾವು ಮಾಡುತ್ತಾ ಇರಬಹುದು ಎಂದು ಹೇಳುತ್ತೀರಾ? ಇದರಿಂದ ನಿಮ್ಮ ವರ್ಚಸ್ಸು ಬೆಳೆಯಬಹುದು.

SRI H. M. CHANNABASAPPA,— It is a question of fact, well, I need not dilate on that ತಾವುಗಳು ಆ ರೀತಿ ಸರ್ಕಾರದ ಲೋಪದೋಷಗಳನ್ನು ಪತ್ತೆಹಚ್ಚಿ ಎತ್ತಿ ತೋರಿಸಲಿಕ್ಕೇ ವಿರೋಧಪಕ್ಷಗಳು ಇರುವುದು.

ಶ್ರೀ ಎಸ್. ಬಂಗಾರಪ್ಪ.— ಹಾಗಾದರೆ ತಾವು ಲೋಪದೋಷಗಳನ್ನು ಮಾಡುವುದಕ್ಕೆ ಇರುವುದೇ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನೀವು ಹೇಳುವುದನ್ನು ಮೆಚ್ಚಿ ಯಾವುದು ಸರಿ ಎಂದು ಕಂಡು ಬರುತ್ತದೆ ಅದನ್ನು ಸರಿಪಡಿಸುವುದು ಎಷ್ಟು ಮೆಚ್ಚುವಂತಹ ಮಾತನ್ನು ತಾವು ಹೇಳುತ್ತೀರಿ ಅದನ್ನು ಮೆಚ್ಚಲೇ ಬೇಕಾಗುತ್ತದೆ. ಎಷ್ಟೋ ಸಾರಿ ತಪ್ಪು ಮಾತನ್ನು ಮೆಚ್ಚಿದ್ದೇವೆ.

ಶ್ರೀ ವಿ. ಎನ್. ಪಾಟೀಲ್.— ನಾವು ಸ್ವಲ್ಪ ಚುಚ್ಚುವ ಹಾಗೆ ಮಾತನಾಡಿದ್ದೇವೆ.

ಶ್ರೀ ಎಚ್. ಎಂ. ಚಿನ್ನಬಸಪ್ಪ.— ಎಷ್ಟೆಷ್ಟು ಚುಚ್ಚುವ ಮಾತು ಮಾತನಾಡಿದರೆ ಅಷ್ಟು ಹೆಚ್ಚು ಅನುಕೂಲವಾಗುತ್ತದೆ. ಅಷ್ಟಷ್ಟು ಹೆಚ್ಚು ಎಚ್ಚರಗೊಳ್ಳುತ್ತೇವೆ. ಆ ಬಗ್ಗೆ ನಮಗೆ ನಿಷ್ಠುರ ಯಾವ ಬಿನ್ನಭಿಪ್ರಾಯವಿಲ್ಲ. ಮತ್ತೆ ಏನೇನು ನಡೆದಿದೆ ಎನ್ನುವುದರ ಬಗ್ಗೆ ಒಂದೊಂದು ಪತ್ರಿಕೆಯಲ್ಲಿ ಒಂದೊಂದು ತರಹ ಸ್ವಲ್ಪ ಹೆಚ್ಚು ಕಡಿಮೆ ಹೇಳಿಕೆಗಳು ಬಂದಿವೆ. ಎಲ್ಲವೂ ಒಂದೇ ಸಮ ಬಂದಿಲ್ಲ. ಪತ್ರಿಕೆಗಳ ಹೇಳಿಕೆಗಳು ಎಲ್ಲವೂ ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ, ಎಲ್ಲವೂ ಕೂಡ ಸರಿ ಎಂದು ಹೇಳುವುದಕ್ಕೂ ಹೋಗುವುದಿಲ್ಲ. ಪೋಲೀಸರು ಹೇಳುವುದೇ ಎಲ್ಲವೂ ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ವಿಷಯ ಬಹಳ ಗಹನವಾದುದು ಮತ್ತು ಮತ್ವದ್ದು ಇದೆ. ಯಾರಾದರೂ ತಪ್ಪು ಮಾಡಿರಲಿ. ಅಖಿಲರಿನಲ್ಲಿ ಚಿಕ್ಕವನೇ ಇರಲಿ ದೊಡ್ಡವನೇ ಇರಲಿ, ಯಾರೇ ಆಗಿರಲಿ ಅಧರ್ಮ ಮಾಡುವುದಕ್ಕೆ ಹೋಗುವುದಿಲ್ಲ. ಧರ್ಮವನ್ನು ಪಾಲಿಸುವುದಕ್ಕೆ ಅಧಿಕಾರ ಸೂತ್ರವನ್ನು ಹಿಡಿದಿರುವುದು.

ಶ್ರೀ ವಾಟಾಳ್ ನಾಗರಾಜ್.— ತಾವು ಅವತಾರ ಪುರುಷರು.

ಶ್ರೀ ಎಚ್. ಎಂ. ಚನ್ನಬಸಪ್ಪ.— ಅವತಾರ ಪುರುಷರಾಗಿರುವುದಕ್ಕೆ ಹುಟ್ಟಿರುವುದು.

ಶ್ರೀ ವಾಟಾಳ್ ನಾಗರಾಜ್.— ಅಲ್ಲಿಗೆ ದಶಾವತಾರ ಎಂದು ಕಾಣುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಸರ್ವ ಅವತಾರ. ಧರ್ಮದಲ್ಲಿ ನಡೆಯುತಕ್ಕದ್ದು ನಿಮ್ಮ ನಮ್ಮ ಎಲ್ಲರ ಕರ್ತವ್ಯ ಇದೆ. ನಾವು ಎಲ್ಲಿಯಾದರೂ ಲೋಪದೋಷ ಮಾಡಿದರೆ ನಮ್ಮನ್ನು ಸರಿಪಡಿಸುವುದಕ್ಕೆ ನಿಮಗೆ ಹಕ್ಕು ಇದೆ. ನಿಮ್ಮ ಸಹಾಯ ತೆಗೆದುಕೊಂಡು ಧರ್ಮವನ್ನು ಪ್ರತಿಪಾದನೆಮಾಡಿ ರಕ್ಷಣೆ ಮಾಡತಕ್ಕ ಕಾರ್ಯದಲ್ಲಿ ನೀವು ನಾವು ಒಕ್ಕೊರಲಿನಿಂದ ಕೆಲಸ ಮಾಡಬೇಕು ಎಂದು ಇಷ್ಟುಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ . ಪೋಲೀಸ್ ಸ್ಟೇಷನ್ನಿನಲ್ಲಿ ಅನುಮಾನಕ್ಕೆ ಎಡೆ ಬರುವ ರೀತಿಯಲ್ಲಿ ಏನಾದರೂ ಘಟನೆ ನಡೆದರೆ ಈ ಕೇರನ್ನು ಪೋಲೀಸರು ಎನ್‌ಕ್ವೈರಿ ಮಾಡುವುದಿಲ್ಲ, The District Magistrate shall order a Magisterial enquiry ಈಗ ನಡೆಸುತ್ತಾ ಇರತಕ್ಕದ್ದು ನನಗೆ ಅಧಿಕೃತವಾಗಿ ತಿಳಿದು ಬಂದಿರುವ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈಗಾಗಲೇ ಒಂದು ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿಯನ್ನು ಪ್ರಾರಂಭ ಮಾಡಿದ್ದಾರೆ, ಅದು ನಡೆಯುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ :—ಯಾರ ಮುಖಾಂತರ ಡಿಸ್ಟ್ರಿಕ್ಟ್ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ? ತಹಸೀಲ್ದಾರರೇ ಅಥವಾ ಸಬ್‌ಡಿವಿಜನಲ್ ಆಫೀಸರ್ ರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ತಾವು ಲಾಯರ್ ತಮಗೆ ಗೊತ್ತಿಲ್ಲವೇ ?

SRI K. PUTTASWAMY :—would the Honable Minister kindly enlighten us as to the scope of the Megisterial enquiry ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಎನ್‌ಕ್ವೈರಿ ನಡೆಯುತ್ತಾ ಇದೆ. ಇದರ ಬಗ್ಗೆ ವಿವರಗಳನ್ನು ನಾವು ಆಗಿಂದಾಗ್ಗೆ ತರಿಸಿಕೊಂಡ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇ ಬೇಕು ಎನ್ನುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಅದನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಕೊಳ್ಳಬೇಕು ಎನ್ನುವ ಹಂಬಲ ಅವರು ಏನು ಹೇಳಿದ್ದಾರೆ ಅದಕ್ಕಿಂಥ ನಮಗೆ ಕೈಮಿಗಿಲಾಗಿದೆಯೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ ; —ಅಧಿಕಾರಿಗಳನ್ನು ಸಸ್ ನ್ಷನ್‌ನಲ್ಲಿ ಇಟ್ಟಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಸಸ್‌ಪೆಂಡ್ ಮಾಡಿದರೆ ನ್ಯಾಯ ದೊರಕುವುದಿಲ್ಲ. ಸಸ್‌ಪೆನ್ಷನ್ ಮಾಡುವುದೇ ಅಲ್ಲ .....

ಶ್ರೀ ವಾಟಾಳ್ ನಾಗರಾಜ್ .—ಅನೇಕ ಇಂಜನಿಯರ್‌ಗಳನ್ನು ಏತಕ್ಕೆ ಸಸ್‌ಪೆನ್ಷನ್ನಿನಲ್ಲಿ ಇಟ್ಟಿದ್ದೀರಾ ? ಅದು ಬೇರೆ ಎಂದು ಕಾಣುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ .—ಪ್ರೈಮಾಫೇಸಿ ಕೇಸ್ ಎಸ್ಟ್ಯಾಬ್ಲಿಷ್ ಆದ ಕೂಡಲೇ ಯಾರನ್ನೂ ಕೂಡ ನಾವು ಮನ್ನಣೆ ಮಾಡುವುದಿಲ್ಲ, ಅವರ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್ ಬಂಗಾರಪ್ಪ .—ಪ್ರೈಮಾ ಫೇಸಿ ಕೇಸಿ ಇದೆ ಎಂದು ಕಂಡು ಕೂಡಲೇ ಸಸ್‌ಪೆನ್ಸ್‌ಷನ್‌ನಲ್ಲಿ ಇಡಂತ್ತೀರಿ, ಆ ಪ್ರಿನ್ಸಿಪಲ್‌ನ್ನು ನಾನು ಒಪ್ಪುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ .—ಸಸ್‌ಪೆನ್‌ಷನ್ ಮಾಡಬೇಕು. ಶಿಕ್ಷೆ ಮಾಡಬೇಕು ಎಂದು ಕಾನೂನಿನ ವಿಧಿ ಇದೆ. On principal where a prima facies case is established, Government will not hesitate to take any action that may be necessary in the interest of justice.

ಶ್ರೀ ಎಸ್. ಬಂಗಾರಪ್ಪ.—ಪೋಲೀಸರೇ ಅಪರಾಧಿಗಳು ಆಗಿರುವುದರಿಂದ ಫೇರ್ ಎನ್‌ಕ್ವೈರಿ ಮಾಡುವ ದೃಷ್ಟಿಯಿಂದ ಸಸ್‌ಪೆನ್‌ಷನ್‌ನಲ್ಲಿ ಇಡುವುದರಲ್ಲಿ ಅರ್ಥವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಅಧಿಕಾರಕ್ಕೆ ಬಂದರೆ ಅಡ್ಮಿನಿಸ್ಟ್ರೇಷನ್ ತೊಂದರೆ ಏನು ಎಂಬುದು ತಮಗೆ ಗೊತ್ತಾಗುತ್ತದೆ Suspension is a very small thing. Suspension after all is no punishment.

SRI S. BANGARAPPA—I did not say it is punishment.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಪರಾಧಿಯನ್ನು ಪತ್ತೆಹಚ್ಚಿ,ಯಾರು ಅಪರಾಧಿಗಳು ಎಂದ ನಿರ್ದಾಕ್ಷಿಣ್ಯವಾಗಿ ವಿಚಾರಣೆಮಾಡಿ, ಅಪರಾಧಿಗಳಿಗೆ ಸೂಕ್ತ ಶಿಕ್ಷೆ ವಿಧಿಸುವ ಕಾರ್ಯದಲ್ಲಿ ನೀವು ಯಾರಿಗೂ ಹಿಂಜರಿಯುವುದಿಲ್ಲ ಎಂದು ಅರಿಕೆ ಮಾಡುತ್ತೇನೆ. ಆದ್ದರಿಂದ ಈ ವಿಷಯದಲ್ಲಿ ಹೆಚ್ಚಿಗೆ ಚರ್ಚೆಮಾಡುವುದು ಬೇಡ. ಅಪರಾಧಿಗಳನ್ನು, ತಪ್ಪು ಮಾಡಿರತಕ್ಕವರನ್ನು, ಆ ರೀತಿ ಅಮಾನುಷ ಕೃತ್ಯಗಳು ನಡೆದಿದ್ದರೆ ಅಮಾನುಷ ಕೃತ್ಯಗಳನ್ನು ಮಾಡಿದವರನ್ನು ಮುಚ್ಚುವುದಾದರೆ ಸರ್ಕಾರ ಇರುವುದಕ್ಕಿಂತ ಹೋಗುವುದೇ ಲೇಸು. ಆದುದರಿಂದ ಈ ವಿಷಯದಲ್ಲಿ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ. ನಮಗೆ ಏನು ಕಾಣುವುದು, ತಮಗೆ ಏನು ಕಾಣುವುದು ಈ ಎಲ್ಲ ವಿಷಯಗಳ ಬಗ್ಗೆ ವಾಸ್ತವಿಕವಾಗಿ ಇನ್‌ವೆಸ್ಟಿಗೇಷನ್ ನಡೆಸಿ ನಿರ್ದಾಕ್ಷಿಣ್ಯವಾಗಿ ತೀರ್ಪು ಕೊಡಲಿಕ್ಕೆ ಸ್ವಲ್ಪ ಏನಾದರೂ ಹೆಚ್ಚುಕಡಿಮೆ ತೊಂದರೆ ಬಂತು ಎಂದರೆ ಅಂತಹ ಸಂದರ್ಭದಲ್ಲಿ ತಮಗೆ ಕೇಳುವುದಕ್ಕೆ ಹಕ್ಕು ಇಲ್ಲ ಎಂದು ಅಲ್ಲ, ಈ ಸಭೆಗೆ ಸರ್ವ ಅಧಿಕಾರವಿದೆ.

SRI C. M. ARUMUGHUM.—Whatever you say we must accept. You must be reasonable.

SRI H. M. CHANNABASAPPA.—You have said many times that I am very reasonable.

SRI M. S. KRISHNAN.—You have been saying that you will be impartial etc., ಆದುದರಿಂದ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಎಂದು ತಾವು ಏನು ಹೇಳಿದ್ದಿರಿ ಅದರ ಸ್ಕೋಪ್ ಏನು ; ಫಂಕ್ಷನ್ ಏನು ; ಹಿಂದೆ ಏನು ಮಾಡಿದ್ದಾತೆ ಎಂಬುದು ತಮಗೆ ಗೊತ್ತಿದ್ದರೆ ವಿವರಣೆಮಾಡಿ.

SRI H. M. CHANNABASAPPA.—At this stage it is not for me to enlarge on what is a mag sterial enquiry. ಅದನ್ನು ಪ್ರತಿಪಾದನೆ ಮಾಡುವುದಕ್ಕೆ ಇದು ಸಮಯವಲ್ಲ.

ಶ್ರೀ ಎಸ್. ಬಂಗಾರಪ್ಪ.—ಫೇರ್ ಎನ್‌ಕ್ವೈರಿ, ಫುಲ್ ಎನ್‌ಕ್ವೈರಿ ಆಗುವ ದೃಷ್ಟಿಯಿಂದ ಮ್ಯಾಜಿಸ್ಟೀರಿಯಲ್ ಎಸ್‌ಕ್ವೈರಿ ಸ್ಕೋಪ್ ಎಷ್ಟು ; ಅದರ ಸಾಧ್ಯಸಾಧ್ಯತೆ ಏನು ಎಂದು ನೋಡಬೇಕಾಗಿಬರುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಇಲ್ಲಿ ಅದರ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ತಾವುಗಳು ಎಲ್ಲಾ ಕ್ರಿಮಿನಲ್ ಲಾಯರುಗಳು ಇದ್ದೀರಿ ತಮಗೆ ಗೊತ್ತಿದೆ.

SRI C. M. ARUMUGHAM. –The Hon. Minister said that the hon. Member is a criminal lawyer and as such he knows about it. I cannot accept such a statement. His statement must be a statement of facts.

SRI H. M CHANNABASAPPA.—It is a well known parlimentary practice that whatever is available in the law books or the Constitution does not require elucidation. ನಾವು ತಮ್ಮ ಅಭಿಪ್ರಾಯವನ್ನು ಮನಗಂಡು ನಿರ್ದಾಕ್ಷಿಣ್ಯವಾಗಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ —ಏನು ಕ್ರಮ ಕೈಗೊಂಡಿವೆ, ನಿಜ ಸಂಗತಿ ಏನು, ಏನು ನಡೆದಿದೆ ಎಂಬುದನ್ನು ಈ ಸಭೆಗೆ ತಿಳಿಸಬೇಕು.

SRI H. M. CHANNABASAPPA.—I am seized of all the feelings that everyone of the hon. Members has expressed, I will get seized of all the matters and Government will take very drastic action in this matter to see that truth comes out and justice is meted out.

ಶ್ರೀ ಕಾಗೋಡು ತಿಮ್ಮಪ್ಪ.—ಈ ಘಟನೆ ನಡೆದು ಮೂರುನಾಲ್ಕು ದಿವಸವಾಗಿದೆ. ಪತ್ರಿಕೆಯಲ್ಲಿ ವರದಿಯಾಗಿದೆ. ಸಂಬಂಧಪಟ್ಟ ಇಲಾಖೆಯಿಂದ ತಿಳಿದು ಒಂದು ಸಣ್ಣ ಹೇಳಿಕೆಯಾದರೂ ಕೊಡಬೇಕಾಗಿತ್ತು. ಆ ರೀತಿ ಮಾಡಿಲ್ಲ. ಇದೆಲ್ಲಾ ತಿಳಿಸಲು ೧೫ ದಿವಸ ಆಗಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಹೇಳಿದ್ದೇನೆ, ನಮಗೆ ಒಂದು ವರದಿ ಬಂದರೆ ಅದು ಸರಿಯಲ್ಲ ಎಂದು ಮಾನ್ಯ ಸದಸ್ಯರು ಹೇಳಬಹುದು. ಎಲ್ಲಾ ವಿಷಯಗಳನ್ನು ತಮ್ಮ ಮುಂದಿಡಲು ಆಸ್ಪದವಿಲ್ಲ ಅದರಿಂದ ಪ್ರಯೋಜನವಾಗುವುದಿಲ್ಲ ಈ ವಿಷಯವನ್ನು ಬಹಳ ಕಳಕಳಿಯಿಂದ ಚರ್ಚೆ ಮಾಡಿದ್ದೀರಿ. ಸರಕಾರ ಅದನ್ನು ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಈ ವಿಷಯದಮೇಲೆ ಸುಮಾರು ಒಂದೂವರೆ ಗಂಟೆ ಚರ್ಚೆಯಾಯಿತು. ಈಗತಾನೆ ಅನ್‌ಫಾರ್ಚುಮೆಂಟ್ ಆಕ್ಸಿಡೆಂಟ್ ಆಯ್ತು, ದುರದೃಷ್ಟಕರವಾದುದು ಆಗಿದೆ. ಇಂಥಾದ್ದು ಈ ಪ್ರಪಂಚ ಹುಟ್ಟಿದ ಲಾಗಾಯ್ತು ಆಗಿದೆ ಸರಕಾರ ಇಂಥ ಘಟನೆ ನಡೆದಾಗ ಎನ್‌ಕ್ವೈರಿ ಮಾಡಿ ಸೂಕ್ತ ಕ್ರಮ ಕೈಕೊಳ್ಳುವುದು. ಕ್ರಿಮಿನಲ್ ಪ್ರೊಸೀಜರ್ ಕೋಡಿನ ಪ್ರಕಾರ ಎಫ್. ಐ. ಆರ್. ಕೋರ್ಟಿಗೆ ಹೋಗಬೇಕು. ಈಗೇನು ಸ್ಪೇಟ್ ಮೆಂಟ್ ಮಾಡಲು ಸಾಧ್ಯ ? ಪೋಲೀಸ್ ಸ್ಟೇಷನ್ನಲ್ಲಿದ್ದ ಅಧಿಕಾರಿ ತಲೆ ತಂದು ಕೈಗೆ ಕೊಡಬೇಕೆ ? ಅನ್ಯಾಯವಾಗಿರಬಹುದು. ಆದರೆ ಅದನ್ನು ಸಪೋರ್ಟ್ ಮಾಡುತ್ತೇವೆಂದು ತಿಳಿಯಬಾರದು.

SRI H. D. DEVE GOWDA.—According to the Hon. Minister's state ment, magisterial enquiry is already going on. What made the Government to order magisterial enqiry?. ಪೋಲೀಸ್ ಅಧಿಕಾರಿ ಕೊಟ್ಟಿರುವ ಹೇಳಿಕೆ, ಪೋಲೀಸ್ ವರದಿ ಇದೆ. ಯಾವ ಆಧಾರದ ಮೇಲೆ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಆಗಲು ನಿರ್ಣಯ ತೆಗೆದುಕೊಳ್ಳಲಾಗಿದೆ? ಎರಡನೆಯದು ಗಾಯವಾಗಿಲ್ಲವೆಂದು ಡಾಕ್ಟರ್ ಸರ್ಟಿಫಿಕೇಟ್ ಪೋಲೀಸ್ ಅಧಿಕಾರಿ ಬರೆಸಿಕೊಂಡಿದ್ದಾರೆ. ಡಾಕ್ಟರನ್ನು ಬೆದರಿಸಿ ಬರೆಸಿಕೊಂಡಿದ್ದಾರೆ.

I have alreary made asuggestion that some expert must be sent from Bangalore to re-examine the dead body. What is the reaction of the Government to that?

ಶ್ರೀ ಕೆ. ಎಂ. ನಾಗಣ್ಣ —ಒಂದು ಕ್ಲಾರಿಫಿಕೇಷನ್. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅಲ್ಲಿಗೆ ಪ್ರೈಮಫ್ಯಾಸಿ ಕೇಸ್ ಇದೆ ಎಂದಾಯ್ತು ಕೋರ್ಟಿಗೆ ಕೇಸ್ ಹೋದರೆ ಮ್ಯಾಜಿಸ್ಟ್ರೇಟರು ಜಾಮೀನಿನಮೇಲೆ ಬಿಡುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ —ಸಾಮಾನ್ಯವಾಗಿ ಪೋಲೀಸರು ಇನ್‌ವೆಸ್ಟಿಗೇಟ್ ಮಾಡುವರು. ರಾಜ್ಯದಲ್ಲಿ ಸಾಮಾನ್ಯವಾಗಿ ಒಂದು ಘಟನೆಯಾದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರವಿದೆ. ಪೋಲೀಸ್ ವರ್ಷನ್ ಒಪ್ಪಿಕೊಳ್ಳಬೇಕಾಗಿಲ್ಲ.

It is open to the District Magistrate to take any action. He is all powerful under the criminal law especially under the circumstances in which this incident has happened. Therefore, we will take seriously all the suggestions made be the hon. Members and try to see that justice is meted out. ಪೋಲೀಸ್ ವರ್ಷನ್ ಸರಿಯೇ, ತಪ್ಪೇ ಎಂದು ತಿಳಿಯಲು, ಸತ್ಯಾಂಶ ಹೊರಗೆ ಬರಲು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ತಜ್ಞೆ ಮಾಡಿದ್ದಾರೆ. ಮ್ಯಾಜಿಸ್ಟ್ರೇಟರಿಂದ ಎನ್‌ಕ್ವೈರಿ ಆಗುವುದು.

SRI K. PUTTASWAMY.—(Chamundeshwari) The Leader of the Opposition has made very very serious allegations and he has also pointed out how the death has taken place under very suspicious circumstances. There may be an official version. The hon. Minister who made the statement on behalf of the Government has made a pretty long statement. But he did not come out with Official version. This would leave the public guessing to a very large extent. I do not say that what the Leader of the Opposition has stated is a fact. After enquiry it may be proved to be false. But the public are entitled to know at this stage what the official version is.

SRI K. SIDDAVEERAPPA.—When the matter is under enquiry how can the Government make a statement? When the matter is under enquiry how would it be appropriate for any Government to come out with a statement ? The hon. Member was in the Ministry.

SRI K. PUTTASWAMY.—There is absolutely nothing inappropriate in the Government coming forward with the version based on the report they have been able to get so far. I do not want the Government to commit itself to any particular position. But all the same I want to repeat that the public are entitled to know the report that they have received at this stage because now that the allegations are made and the governments have already indicated that a magisterial enquiry is going on, it would lead the public to form any impression that they would like to, because no report of the police is yet given to this House. I very much request the minister to tell us what is the report that he has been able to get on this issue.

SRI H. M. CHANNABASAPPA.—SRI Puttaswamy is a well know lawyer and he has also run the Government and also a good parliamentarian.

SRI C. M. ARUMUGAM.—The hon. minister is paying this compliment to every member.

SRI H. M. CHANNABASAPPA.— Wherever it is due, I must give. Whenever the hon. member has deserved it, I have given, The Government feels that when the magisterial enquiry on a very important thing of this kind is going on, it is not expendient to make a statement—an official version or a departmental version I request the House for the time being to be content with this.

MADAM SPEAKER.—Next item